**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>**

<u>ಸಿ.ಸಿ. ನಂ.***178/2024***</u>

***<u>ಫಿರ್ಯಾದುದಾರರುಃ</u>*** ಃ ಸರ್ಕಾರದ ಪರವಾಗಿ ಹರಿಹರಪುರ ಪೊಲೀಸರು

**ವಿರುದ್ಧ**

***<u>ಆರೋಪಿತರುಃ</u>***

1. ಎಂ.ಎಸ್. ಭವಾನಿ ಕೋಂ ಚಂದ್ರಶೇಖರ್ ಶೆಟ್ಟಿ, 50 ವರ್ಷ, ಪೇಪರ್ ಏಜೆನ್ಸಿ,

2. ಚಂದ್ರಶೇಖರ್ ಹೆಚ್.ಎಸ್. ಬಿನ್ ಶ್ಯಾಮ್ ಶೆಟ್ಟಿ, 55 ವರ್ಷ, ಪೇಪರ್ ಏಜೆನ್ಸಿ,

3 ಎಂ.ಎಸ್. ವಿಶಾಲ ಕೋಂ ಸತೀಶ್ ಶೆಟ್ಟಿ, 45 ವರ್ಷ, ಪಾನಿಪೂರಿ ಅಂಗಡಿ,
ಎಲ್ಲರೂ ವಾಸ ಜೆ.ಪಿ. ನಗರ, ಚಾವಲ್ಮನೆ ಗ್ರಾಮ, ಕೊಪ್ಪ ತಾಲ್ಲೂಕು.

**<u>ದೋಷಾರೋಪಣೆ</u>**

ದಿನಾಂಕ 26.02.2024 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ಹರಿಹರಪುರ ಠಾಣಾ ವ್ಯಾಪ್ತಿಯ ಚಾವಲ್ಮನೆ ಗ್ರಾಮದಲ್ಲಿ ಚಾಸಾ.1 ಶ್ರೀಮತಿ ಪಾರ್ವತಿ ರವರು ತಮಗೆ ಸೇರಿದೆ ಎನ್ನಲಾದ ಶೆಡ್ ಇರುವ ನಿವೇಶನದಲ್ಲಿ ಇದ್ದ ತೆಂಗಿನ ಸಸಿಗೆ ನೀರು ಹಾಕುತ್ತಿರುವಾಗ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನಿಮ್ಮ ಪೈಕಿ 1 ನೇ ಆರೋಪಿತಳಾದ ನೀವು 2 ಮತ್ತು 3 ನೇ ಆರೋಪಿಗಳೊಂದಿಗೆ ಹೋಗಿ ನಿಮ್ಮ ಕೈಯಲ್ಲಿ ಅಡಿಕೆ ದಬ್ಬೆಯನ್ನು ಹಿಡಿದುಕೊಂಡು ಚಾಸಾ.1 ರವರ ಬಲಕೈಗೆ ಹೊಡೆದು, ಕೈಯಿಂದ ಚಾಸಾ.1 ರವರ ಬೆನ್ನಿಗೆ ಗುದ್ದಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ಭಾ.ದಂ.ಸಂ. ಕಲಂ 324 ಸಹ ಕಲಂ 34 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ ಎಂದೂ,

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು ಚಾಸಾ.1 ಮತ್ತು 4 ರವರನ್ನು ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಭಾ.ದಂ.ಸಂ. ಕಲಂ 506 ಸಹ ಕಲಂ 34 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಆದುದರಿಂದ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕೆಂದು ನಿರ್ದೇಶಿಸಿದ್ದೇನೆ.

ಸಹಿ/- 21.06.2025.
(ನಂದಿನಿ ಎಂ.ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ, ಕೊಪ್ಪ.

**<u>ದೋಷಾರೋಪಣೆ</u>**

ಪ್ರ-1ಃ ಈ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉಃ ಆ-1 ತಿಳಿಯಿತು.

ಆ-2 ತಿಳಿಯಿತು

ಆ-3 ತಿಳಿಯಿತು

ಪ್ರ-2ಃ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ನಿಮಗೆ ಏನಾದರೂ ಪ್ರತಿರಕ್ಷೆ ಇದೆಯೇ?

ಉಃ ಆ-1 ವಿಚಾರಣೆಯಾಗಬೇಕು.
ಆ-2 ವಿಚಾರಣೆಯಾಗಬೇಕು
ಆ-3 ವಿಚಾರಣೆಯಾಗಬೇಕು

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 21.06.2025.

ಸಹಿ/- 21.06.2025.
(ನಂದಿನಿ ಎಂ.ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ, ಕೊಪ್ಪ.

ಆರೋಪಿ ಸಹಿಃ